<u>ಅಸಲು ದಾವಾ ಸಂಖ್ಯೆಃ **- 47/2022**</u> ಪಿ.ಡಬ್ಲ್ಯೂ**:-2**

ದಿನಾಂಕಃ **31.07.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ಈ ದಾವೆಯನ್ನು ವಾದಿಯು ಪ್ರತಿವಾದಿಗಳ ಅಜ್ಜ ರಾಮಪ್ಪರವರು ಬರೆದುಕೊಟ್ಟಿರುವ ಕ್ರಯದ ಕರಾರು ಪತ್ರಕ್ಕೆ ಸಂಬಂಧಪಟ್ಟಂತೆ ದಾವೆಯನ್ನು ಸಲ್ಲಿಸಿದ್ದಾರೆ. ವಾದಿ ನನ್ನ ಹೆಂಡತಿ. ನಿಪಿ-1 ಮುಖ್ತಾರನಾಮೆಯಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತು. ನಿಪಿ-1 ಮುಖ್ತಾನಾಮೆಯನ್ನು ನನ್ನ ಹೆಂಡತಿಗೆ ಆರೋಗ್ಯ ಸರಿ ಇಲ್ಲದ ಕಾರಣ ಈ ದಾವೆಯಲ್ಲಿ ಹಾಜರಾಗಿ ಸಾಕ್ಷ್ಯವನ್ನು ನುಡಿಯಲು ಮುಖ್ತಾರನಾಮೆಯನ್ನು ಬರೆದುಕೊಟ್ಟಿರುತ್ತಾರೆ. ವಾದಿಗೆ ಆರೋಗ್ಯ ಸರಿ ಇಲ್ಲದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿಯು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಿಪಿ-1 ಮುಖ್ತಾನಾಮೆಯಲ್ಲಿ ವಾದಿಗೆ ನಿರ್ದಿಷ್ಟವಾಗಿ ಯಾವ ಖಾಯಿಲೆಯಿಂದ ಬಳಲುತ್ತಿದ್ದಾರೆ ಎಂದು ಸ್ಪಷ್ಟವಾಗಿ ನಮೂದಾಗಿಲ್ಲ ಎಂದರೆ ಸರಿ. ನಿಪಿ-1 ಚಾಪಕಾಗದವನ್ನು ನನ್ನ ಹೆಸರಿಗೆ ಖರೀದಿ ಮಾಡಿರುತ್ತೇವೆ. ನಿಪಿ-1 ಮುಖ್ತಾನಾಮೆಯನ್ನು ನ್ಯಾಯಾಲಯದ ಆವರಣದಲ್ಲಿ ನೋಟರಿಯನ್ನು ಮಾಡಿಸಿರುತ್ತೇವೆ. ಅಪರ ಸಿವಿಲ್ ನ್ಯಾಯಾಲಯ ಹೊನ್ನಾಳಿಯಲ್ಲಿ ಅಸಲು ದಾವಾ ಸಂಖ್ಯೆ 180/2014 ರ ದಾವೆಯಲ್ಲಿ ಭಾಗಾಂಶ ಕೋರಿ ನಮ್ಮ ಕುಟುಂಬದ ವಿರುದ್ಧ ಸಲ್ಲಿಸಿದ್ದೇನೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಸಂಬಂಧಪಟ್ಟಂತೆ ಗೌ.ಹಿರಿಯ ಸಿವಿಲ್ ನ್ಯಾಯಾಲಯ ಹೊನ್ನಾಳಿಯಲ್ಲಿ ಎಂ ಎ ಮತ್ತು ಆರ್ ಎ ಮೇಲ್ಮನವಿಗಳು ಚಾಲ್ತಿಯಲ್ಲಿರುತ್ತವೆ ಎಂದರೆ ಸರಿಯಲ್ಲ. ಕೋರ್ಟ್, ಕಚೇರಿಗಳ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ. ವಾದಿಯು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯವನ್ನು ಹೇಳಿದರೆ ಸತ್ಯಾಂಶ ಹೊರಬರುತ್ತದೆ

ಎಂಬ ಉದ್ದೇಶದಿಂದ ವಾದಿಯ ಪರವಾಗಿ ನಾನೇ ನಿಪಿ-1 ಮುಖ್ತಾನಾಮೆಯನ್ನು ಪಡೆದುಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.